ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಹಾಗೂ ಸವಣೂರು ಡಿಗ್ರಿ ಕಾಲೇಜುಗಳ ಕೆಲಸ ಮಾಡುವ ಅಟೆಂಡರ್‌ಗಳ ಕುರಿತು.

1850 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಸರ್ಕಾರಿ ಡಿಗ್ರಿ ಕಾಲೇಜು (ಪ್ರಥಮ ದರ್ಜೆ ಕಾಲೇಜು)ಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಜವಾನರು ಹಾಗೂ ಅಟೆಂಡರ್‌ಗಳು ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ?

ಆ) ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಹಾಗೂ ಸವಣೂರು ಡಿಗ್ರಿ ಕಾಲೇಜುಗಳಲ್ಲಿ ಕೆಲಸ ಮಾಡುವವರ (ಅಟೆಂಡರ್) ಹೆಸರುಗಳೇನು? ಸದರಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಎಷ್ಟು ಪಗಾರವನ್ನು ಖಜಾನೆಯ ಮುಖಾಂತರ ಕೊಡಲಾಗಿದೆ?

ಇ) ಸದರಿ ಗುತ್ತಿಗೆದಾರರನ್ನು ನೌಕರಿಯಿಂದ ತೆಗೆಯಲು ಆದೇಶ ಹೊರಡಿಸಲಾಗಿದೆಯೇ?

ಈ) ಎಷ್ಟು ಜನ ಜವಾನರು ಹಾಗೂ ಅಟೆಂಡರ್‌ಗಳು ಯಾವ ತಾರೀಖಿನಿಂದ ಕೆಲಸ ಮಾಡುತ್ತಿದ್ದಾರೆ ಈಗ ಅವರನ್ನು ಸೇವೆಯಿಂದ ವಜಾಗೊಳಿಸಲು ಕಾರಣಗಳೇನು?

ಉ) ಸದರಿ ನೌಕರದಾರರನ್ನು ಖಾಯಂಗೊಳಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಯಾರು ಇಲ್ಲ.

ಆ) ಬಂಕಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರೀ ಎ.ಎನ್. ಸುತ್ತಾರ್, ಖಾಯಂ ಅಟೆಂಡರ್ ಆಗಿ ದಿನಾಂಕ : 17.2.94 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸವಣೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರೀ ಸಿ.ಎಸ್. ದಾಮೋದರ ಮಟುರ್ ಹಾಗೂ ಶ್ರೀ ಆರ್. ಎನ್. ಸಂತಪತಿ ಈ ಇಬ್ಬರು ಅಟೆಂಡರ್, ಖಾಯಂ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ನೌಕರರಿಗೆ ಸರ್ಕಾರಿ ನಿಯಮಾನುಸಾರ ಖಾಯಂ ಅಟೆಂಡರ್ ಅವರುಗಳಿಗೆ ನೀಡುತ್ತಿರುವ ವೇತನವನ್ನು ನೀಡುಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಉತ್ತರಗಳನ್ನು ಮಂಡಿಸಲಾಗಿದೆ.